ಅಲ್ಲಿ ಸಿಕ್ಕಾಪಟ್ಟೇ ಜನ ಸೇರಿತ್ತು. ಪೊಲೀಸು, ನಾಯಿ ಎಲ್ಲ ಬಂದಿತ್ತು. ನನಗೆ ಲೇಟಾಗ್ತದೆ ಅಂತ ಬಂದೆ ನಾನು. ಈಗ ಇಂಟರ್ನೆಟ್ಟಿನಲ್ಲೇ ನೋಡಿದ್ದು..."



ಊರಿನವರೇ ಇನ್ನೂ ನಾಲ್ಕೈದು ಮಂದಿ ಆಫೀಸಿನಲ್ಲಿದ್ದರು. ಎಲ್ಲರ ಬಾಯಲ್ಲೂ ಅದೇ ಮಾತು. "ಇಲೆಕ್ಟ್ರೀಶಿಯನ್ ಮಾರಾಯ್ರೆ ಅಂವ! ಸೇತು ಅಂತ. ನೀವು ಖಂಡಿತ ನೋಡಿದ್ದೀರಿ ಅವನ್ನ. ಭಯಂಕರ ಕುಡಿ. ಪೆಟ್ಟಿಸ್ಟ್ ಬೇರೆ. ಮನೆಗೆ ಹೋಗ್ತಿರ್ಲಿಲ್ಲ. ಅಲ್ಲೇ ಎಲ್ಲಾದ್ರು ಬಿದ್ಕೊಳ್ತಿದ್ದ ಅಂತೆ, ಸಾವು."

ಮತ್ತೆ ಶೇಷಗಿರಿ ಹನ್ನೊಂದು ಗಂಟೆ ಹೊತ್ತಿಗೆ ದಯ್ಜೀವರ್ಲ್ಡ್ ತೆರೆದು ನೋಡಿದರೆ ಆರೇಳು ಫೋಟೊ ಹಾಕಿದ್ದು ಒಂದರಲ್ಲಿ ಅವನ ಫ್ಲ್ಯಾಟು ಕೂಡ ಕಾಣುತ್ತಿತ್ತು. ಕೊಲೆಯಾದವ ಸ್ವಸ್ಥ ಮಲಗಿದಂತಿದ್ದ, ಕಾಲು ಕ್ರಾಸ್ ಹಾಕಿಕೊಂಡು. ಅವನಿಗೆ ಸತ್ತದ್ದೇ ಗೊತ್ತಾಗಿರಲಿಕ್ಕಿಲ್ಲ ಎನಿಸಿತು. ಅದಾದರೆ ಎಷ್ಟು ಒಳ್ಳೆಯದಲ್ಲವೆ ಎನಿಸಿತು ಶೇಷಗಿರಿಗೆ. ತಲೆಯ ಭಾಗಕ್ಕೆ ದೊಡ್ಡ ಕಲ್ಲು ಇತ್ತು, ಮುಖ ಏನೂ ಕಾಣುತ್ತಿರಲಿಲ್ಲ. ಶರಟು, ಪ್ಯಾಂಟು ನೋಡಿದರೆ ಸರಿಯಾಗಿಯೇ ಡ್ರೆಸ್ಸು ಮಾಡಿದ್ದ ವ್ಯಕ್ತಿ. ಅವನು ಶರ್ಟ್ ಟಕ್ ಮಾಡಿದ್ದು ಕೂಡ ಹಾಳಾಗಿರಲಿಲ್ಲ. ಪಕ್ಕದಲ್ಲೇ ಒಂದು ಜೊತೆ ಸ್ಲಿಪ್ಪರ್ಸ್ ಇದ್ದು, ಪೊಲೀಸರು ಅದನ್ನು ಮೂಸುವಂತೆ ನಾಯಿಯನ್ನು ಬಲವಂತ ಮಾಡುತ್ತಿರುವ ಚಿತ್ರವಿತ್ತು. ಸಾಕಷ್ಟು ಜನರೂ ಸೇರಿದ್ದರು. ಇಂಟರ್ನೆಟ್ಟಿನಲ್ಲಿ ತನ್ನದೇ ಫ್ಲ್ಯಾಟು ಕಂಡು ಖುಷಿಯಾಗಿ, ಮರ್ಡರ್ ನೋಡಲು ಬೆಳಿಗ್ಗೆಯೇ ಬಂದು ಸೇರಿದ ಮಂದಿಯಲ್ಲಿ ತನ್ನ ಪರಿಚಯದವರು ಯಾರ್‍ಯಾರಿದ್ದಾರೆಂದು ಒಬ್ಬೊಬ್ಬರನ್ನಾಗಿ ಗುರುತಿಸುವ ಕೆಲಸಕ್ಕೆ ತೊಡಗಿದ.

ಯಾರೋ ಒಬ್ಬರು, "ಛೆ ಎಂಥ ಬರ್ಬರ ಕೃತ್ಯ! ಮನುಷ್ಯತ್ವ ಇಲ್ಲದವರು! ತಮ್ಮದೇ ಮನೆಯವರಾಗಿದ್ದರೆ ಹೀಗೆ ಕೊಲ್ಲುವುದಕ್ಕೆ ಆಗುತ್ತದೆಯೆ!" ಎಂದು ಕಾಮೆಂಟ್ ಕೂಡ ಹಾಕಿದ್ದರು. ಇನ್ನೊಬ್ಬರು ಬರೆದ ಕಾಮೆಂಟ್ ಶೇಷಗಿರಿಗೆ ಸಕತ್ ಖುಷಿಕೊಟ್ಟಿತು. ಕಾಪ್ಸ್ ಆರ್ ಬ್ಯುಸೀ ಬೀಟಿಂಗ್ ರೈಟ್ ವಿಂಗರ್ಸ್! ಯಾಂಡ್ ಸಿಎಮ್ಮ್ ಈಸ್ ಗಡದ್ ಕುಂಭಕರ್ಣ ನಿದ್ದೆ... ಉಂದು ಪೂರಾ ನನ ಜಾಸ್ತಿ ಯೇ ಆಪುಂಡಾ ಪಂಡದ್!